**3.2.1 Faculty and Students Publications in Saranga Kiran Magazine**


# ಸಾರಂಗ ಕಿರಣ

ಮಾಸ ಪತ್ರಿಕೆ

SARANGA KIRAN

ಕನ್ನಡ ಮಾಸ ಪತ್ರಿಕೆ

ಸಂಪುಟ 02 | ಸಂಚಿಕೆ : 05 | ರಿ.ನಂ.ಕೆಎಆರ್‌ಕೆಎಎನ್/2021/81161 | ವಿಜಯಪುರ | ಅಗಸ್ಟ್, 2022 | ಪುಟ: 08 | ಬೆಲೆ: ರೂ. 1

Volume : 02 | Issue : 05 | Reg. No.: KARKAN/2021/81161 | Vijayapur | August, 2022 | Page : 08 | Price : R


ಪೂಜ್ಯ ಶ್ರೀ ಚೆನ್ನವೀರಸ್ವಾಮೀಜಿ ಪ್ರತಿಷ್ಠಾನ ಸಾರಂಗಮಠ-ಗಚ್ಚಿನಮಠ, ಸಿಂದಗಿ

ಅಂ. ಡಾ. ಆರ್.ಆರ್. ವಾರದ, ಸಿಂದಗಿ ಅವರ ಸ್ಮರಣಾರ್ಥ

ಆರೋಗ್ಯ ತಪಾಸಣೆ ಹಾಗೂ ನೇತ್ರ ಚಿಕಿತ್ಸಾ ಶಿಬಿರ

ಸಿಂದಗಿ ಡಾ. ಎಸ್.ಆರ್ ವಾರದ ಅವರ ಪರಿವಾರ ಹಾಗೂ ವಿಜಯಪುರ

ಅನುಗ್ರಹ ಕಣ್ಣಿನ ಆಸ್ಪತ್ರೆ ಇವರ ಸಹಯೋಗದಲ್ಲಿ

ದಿನಾಂಕ : 31-07-2022




ಪ್ರಕಟಣೆ: ದಿನಾಂಕ: 20-08-2022 ಮುಂಜಾನೆ : 10.00 ಗಂಟೆಗೆ ಸಾರಂಗಮಠದಲ್ಲಿ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗುವುದು.
ಮಾನವೀಯ ಅನುಕಂಪವುಳ್ಳ ಅರ್ಹ ರಕ್ತದಾನಿಗಳು ಶಿಬಿರದಲ್ಲಿ ಭಾಗವಹಿಸಲು ವಿನಂತಿಸಲಾಗಿದೆ.
ಭಾಗವಹಿಸಿದ ರಕ್ತದಾನಿಗಳಿಗೆ ಪ್ರಶಸ್ತಿ ಪತ್ರ ನೀಡಲಾಗುವುದು

# ಭಾರತೀಯ ಗ್ರಂಥಾಲಯದ ಪಿತಾಮಹ

ಡಾ. ಶ್ರೀದೇವಿ ಪಿ. ಸಿಂದಗಿ
ಗ್ರಂಥಪಾಲಕರು, ಜಿ.ಪಿ.ಪೋರವಾಲ ಕಾಲೇಜ ಸಿಂದಗಿ

ಗ್ರಂಥಾಲಯವು ಜ್ಞಾನದ ಭಂಡಾರವಿದ್ದಂತೆ, ಜ್ಞಾನ ದಾಹವನ್ನು ನೀಗಿಸುವ ಕಾಮಧೇನು, ವ್ಯಕ್ತಿಯ ಉತ್ತಮ ವ್ಯಕ್ತಿತ್ವದ ನಿರ್ಮಾಣದಲ್ಲಿ ಜ್ಞಾನದ ಪಾತ್ರ ಅಪಾರ 'ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ' ಎಂದ ಬಸವಣ್ಣ. 'ಗ್ರಂಥಗಳು ಇಲ್ಲದ ಕೋಣೆ ಆತ್ಮವಿಲ್ಲದ ದೇಹವಿದ್ದಂತೆ' ಎಂಬ ನಾಣ್ಣುಡಿ ಇದೆ. ಜ್ಞಾನಾರ್ಜನೆಗೆ ಅಗತ್ಯವಾದ ಗ್ರಂಥಗಳು ಇರುವ ಆಲಯವೇ ಗ್ರಂಥಾಲಯ. ಶಾಲಾ - ಕಾಲೇಜು ಹಾಗೂ ಸಾರ್ವಜನಿಕರ ಗ್ರಂಥಾಲಯಗಳನ್ನು ಸತತ ಅಧ್ಯಯನಕ್ಕಾಗಿ ನಿರ್ಮಿಸಲಾಗಿದೆ.

ಗ್ರಂಥಾಲಯಗಳ ಅಭಿವೃದ್ಧಿಗೇ ಡಾ. S R ರಂಗನಾಥನ್ ರ ಕೊಡುಗೆ ಅಪಾರ. ಇವರ ಜನ್ಮದಿನವಾದ ಆಗಸ್ಟ್ 12 ರಂದು ರಾಷ್ಟ್ರೀಯ ಗ್ರಂಥಪಾಲಕರ ದಿನವನ್ನಾಗಿ ಆಚರಿಸಲಾಗುತ್ತಿದೆ. ಶಿಯಾಳಿ ರಾಮಾಮೃತ ರಂಗನಾಥರು ತಮಿಳ್ನಾಡಿನ ತಂಜಾವೂರು ಜಿಲ್ಲೆಯ ಶಿಯಾಳಿ ಯಲ್ಲಿ 1892 ಆಗಸ್ಟ್ 12 ರಂದು ಜನಿಸಿದರು. ತಮ್ಮ ವೃತ್ತಿ ಜೀವನವನ್ನು ಅತ್ಯಂತ ಪವಿತ್ರ ವೃತ್ತಿಯಾದ ಶಿಕ್ಷಕ ವೃತ್ತಿಯನ್ನು ಒಬ್ಬ ಗಣಿತ ತಜ್ಞನಾಗಿ ಪ್ರಾರಂಭಿಸಿದರು. ಮತ್ತು ಪ್ರವೃತ್ತಿಯಲ್ಲಿ ಗ್ರಂಥಪಾಲಕರಾಗಿದ್ದರು. ಕೋಲನ್ ವರ್ಗೀಕರಣ ಮತ್ತು ಗ್ರಂಥಾಲಯದ ಪಂಚಸೂತ್ರಗಳು ಗ್ರಂಥಾಲಯಕ್ಕೆ ನೀಡಿರುವ ಅಭೂತಪೂರ್ವ ಕೊಡುಗೆಗಳು, ಗ್ರಂಥಾಲಯಗಳು ಹೇಗೆ ಇರಬೇಕು ಎನ್ನುವದಕ್ಕೆ ಈ ಪಂಚಸೂತ್ರಗಳು ಸಹಕಾರಿ

ಗ್ರಂಥಾಲಯದ ಪಂಚಸೂತ್ರಗಳು

1. ಗ್ರಂಥಗಳು ಓದಲು: ಗ್ರಂಥಗಳು ಜ್ಞಾನಾರ್ಜನೆಯ ಒಂದು ಅಂಗ

2. ಗ್ರಂಥಕೊಬ್ಬರು: ಪ್ರಜಾಪ್ರಭುತ್ವದ ಅರ್ಥದಲ್ಲಿ ಪುಸ್ತಕ ಪ್ರತಿಯೊಬ್ಬರಿಗೂ ಓದುವ ಅಧಿಕಾರವಿದೆ, ಸಾಮಾನ್ಯ - ಅಸಾಮಾನ್ಯ, ಮಕ್ಕಳು - ಹಿರಿಯರು ಎಲ್ಲರಿಗೂ ಅವರದ್ದೇ ಆದ ಪುಸ್ತಕ .

3.ಎಲ್ಲರಿಗೂ ಗ್ರಂಥಗಳು: ಪ್ರತಿಯೊಂದು ಗ್ರಂಥಕ್ಕು ಅದರದ್ದೇ ಆದ ಓದುಗ


4. ಗ್ರಂಥ ಓದುಗನ ಸಮಯ ಉಳಿಸು: ಪುಸ್ತಕಗಳ ಕೇಂದ್ರೀಕೃತ ವರ್ಗೀಕರಣ ಹಾಗೂ ಸುಚೀಕರಣಗಳು ವಿಷಯವಾರು ಪುಸ್ತಕಗಳ ವಿಂಗಡನೆ, ಪುಸ್ತಕಗಳ ಸಿಗುವಿಕೆಯು ಓದುಗನ ಸಮಯ ಉಳಿಸುವಲ್ಲಿ ಸಹಾಯಕಾರಿ.

5. ಗ್ರಂಥಾಲಯ ಬೇಳೆಯುವ ಶೀಶು: ಶಿಶುವಿನ ಬೆಳವಣಿಗೆ ಹೇಗೆ ಸಮಗ್ರವಾದ ಗಾತ್ರದಲ್ಲಿ ಸಾಗುತ್ತದೆಯೋ ಹಾಗೆ ಪ್ರತಿ ಗ್ರಂಥಾಲಯದ ಬೆಳವಣಿಗೆ.

ಇವರ ಗ್ರಂಥಾಲಯದ ಪಂಚ ಸೂತ್ರಗಳು ಪ್ರತಿ ಭಾರತೀಯ ಗ್ರಂಥಾಲಯದ ಹುಟ್ಟು ಮತ್ತು ಬೆಳವಣಿಗೆ ಇಂದು ಕೂಡ ಬೆನ್ನೆಲುಬಾಗಿ ನಿಂತಿದೆ. ಗ್ರಂಥಾಲಯಗಳಲ್ಲಿ ಕೋಲನ್ ವರ್ಗೀಕರಣ ಪುಸ್ತಕಗಳ ಕೇಂದ್ರೀಕೃತ ವರ್ಗೀಕರಣ ಮತ್ತು ಜೋಡಣೆಗೆ ಸಹಕಾರಿಯಾಗಿದೆ. ಭಾರತದ ಸಾರ್ವಜನಿಕ ಗ್ರಂಥಾಲಯಗಳ ವಿಕಸನಕ್ಕೆ ಸಾರ್ವಜನಿಕ ಗ್ರಂಥಾಲಯಗಳ ಶಾಸನವನ್ನು ಕೂಡ ಜಾರಿಗೆ ಬರುವಂತೆ ಮಾಡಿದರು. 1962 ರಲ್ಲಿ ಭಾರತದ ಗ್ರಂಥಾಲಯ ಸೇವೆಗಳಲ್ಲಿ ತಂತ್ರಜ್ಞಾನಗಳ ಬಳಕೆ ಮತ್ತು ಮಾಹಿತಿ ಒದಗಿಸುವ ಪರಿಯನ್ನು ಬದಲಿಸಲು ಭಾರತೀಯ ಸಂಖ್ಯಾಶಾಸ್ತ್ರ ಸಂಸ್ಥೆಯ ನೆರಳಲ್ಲಿ ಸಾಕ್ಷ್ಯ ಸಂಕಲನ ಸಂಶೋಧನೆ ಮತ್ತು ತರಬೇತಿ ಕೇಂದ್ರ (DRTC) ಕೂಡ ಹುಟ್ಟು ಹಾಕಿದರು. ಇವರು ಗ್ರಂಥಾಲಯಕ್ಕೆ ಸಂಬಂಧಿಸಿದ 50 ಕ್ಕೂ ಹೆಚ್ಚು ಕೃತಿಗಳನ್ನು ಮತ್ತು 1000 ಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ.

Dr. S. R . ರಂಗನಾಥನ್ ಅವರ ಈ ಎಲ್ಲ ಸೇವೆಗಳನ್ನು ಗುರುತಿಸಿ ಭಾರತ ಸರಕಾರವು 1935 ರಲ್ಲಿ "ರಾವ್ ಸಾಹೇಬ್ " ಎಂಬ ಪದನಾಮ ಇಟ್ಟು ಸನ್ಮಾನಿಸಿತು. 1957 ರಲ್ಲಿ " ಪದ್ಮಶ್ರೀ ಪ್ರಶಸ್ತಿ" ನೀಡಿ ಗೌರವಿಸಿದೆ. ಇಷ್ಟೆ ಅಲ್ಲದೆ 1965 ರಲ್ಲಿ "ರಾಷ್ಟ್ರೀಯ ಸಂಶೋಧನಾ ಪ್ರಾಧ್ಯಾಪಕ " ಎಂಬ ಪ್ರಶಸ್ತಿ ನೀಡಿದೆ. ಈ ಎಲ್ಲ ಅತ್ಯುತ್ತಮ ಸೇವೆಯನ್ನು ಗಮನಿಸಿ ಇವರನ್ನು "ಗ್ರಂಥಾಲಯದ ಪಿತಾಮಹನೆಂದು " ಗುರುತಿಸಿ ಪ್ರಸ್ತುತ ಇವರು ಹುಟ್ಟಿದ ದಿನವನ್ನು "ರಾಷ್ಟ್ರೀಯ ಗ್ರಂಥಪಾಲಕರ ದಿನ " ಎಂದು ಆಚರಿಸಲಾಗುತ್ತಿದೆ.

*****



!! ಓಂ ಶ್ರೀ ಗುರುಭ್ಯೋ ನಮಃ !!
ಪ್ರಕಟಣೆ
ಈ ಮೂಲಕ ಎಲ್ಲ ಸದ್ಭಕ್ತರಿಗೆ ತಿಳಿಸುವದೇನೆಂದರೆ, ಪ್ರತಿ ವರ್ಷದ ಪದ್ಧತಿಯಂತೆ ಈ ವರ್ಷವೂ ಶ್ರಾವಣ ಮಾಸದ ಮಹಾಪ್ರಸಾದವನ್ನು ದಿನಾಂಕ:24-8-2022 ಬುಧವಾರದಂದು ಮುಂಜಾನೆ 11:30 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ಶ್ರೀಮಠದಲ್ಲಿ ಜರುಗುವುದು. ಪ್ರತಿ ವರ್ಷ ತಮ್ಮ ಮನೆಗೆ ಖುದ್ದಾಗಿ ಬಂದು ಬಿನ್ನದ ಆಮಂತ್ರಣ ಕೊಡಲು ನಮ್ಮ ಕಾರ್ಯಕರ್ತರು ಬರುತ್ತಿದ್ದರು, ಈಗ ಕಾರ್ಯಕರ್ತರ ಕೊರತೆ ಇರುವುದರಿಂದ ಇದೇ ಬಿನ್ನದ ಆಮಂತ್ರಣ ಎಂದು ಪರಿಗಣಿಸಿ ಶ್ರೀಮಠಕ್ಕೆ ಆಗಮಿಸಿ ಕರ್ತೃ ಗದ್ದುಗೆಗಳ ದರ್ಶನ ಪಡೆದು ಮಹಾಪ್ರಸಾದವನ್ನು ಸ್ವೀಕರಿಸಿ ಪುನೀತರಾಗಬೇಕೆಂದು ಈ ಮೂಲಕ ತಿಳಿಸಲಾಗಿದೆ
|= ಶ್ರೀಸಾರಂಗಮಠದ ವತಿಯಿಂದ .|

# ಸಾರಂಗ ಕಿರಣ

**SARANGA KIRAN**

ಮಾಸ ಪತ್ರಿಕೆ

ಕನ್ನಡ ಮಾಸ ಪತ್ರಿಕೆ

| ಸಂಪುಟ 02 | ಸಂಚಿಕೆ : 12 | ರಿ.ನಂ.ಕೆಎಆರ್‌ಕೆಎಎನ್/2021/81161 | ವಿಜಯಪುರ | ಮಾರ್ಚ್, 2023 | ಪುಟ: 08 | ಬೆಲೆ: ರೂ. 10/- |
|---|---|---|---|---|---|---|
| Volume : 02 | Issue : 12 | Reg. No.: KARKAN/2021/81161 | Vijayapur | March, 2023 | Page : 08 | Price : Rs.10/- |



G.P. PORWAL ARTS COMMERCE & V.V.SALIMATH SCIENCE COLLEGE SINDAGI
LIBRARY





ಜಗದ್ಗುರು ರೇಣುಕಾಚಾರ್ಯರ ಜಯಂತಿ ದಿನಾಂಕ: ೦೫-೦೩-೨೦೨೩

# ಪ್ರಪಂಚ

ಶ್ರೀ. ಮಹೇಶ ಆರ್. ರೋಡಗಿ
ಜಿ.ಪಿ.ಪೋರವಾಲ ಕಾಲೇಜ, ಸಿಂದಗಿ

ಪ್ರಪಂಚ ಎಂಬುದು ಮಾಯಾ ಬಜಾರ ಇದ್ದಂಗ, ಇಲ್ಲಿ ಗೆದ್ದು ಹೋಗಬೇಕು ಎಂದು ನಮ್ಮ ಹಿರಿಯರ ಮಾತು. ಈ ಪ್ರಂಪಚದಲ್ಲಿ ನೂರಾರು ತರಹದ ವ್ಯಕ್ತಿಗಳಿರುತ್ತಾರೆ. ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿಯತ್ವ ಹಾಗೂ ಆಲೋಚನೆಗಳು ಮತ್ತು ಮನೋಭಾವ ಬೇರೆನೆ ಇರುತ್ತದೆ. ಇಲ್ಲಿ ಒಂದೆ ಆಲೋಚನೆಗಳು ಮತ್ತು ಮನೋಭಾವದ ವ್ಯಕ್ತಿಗಳು ಕೂಡಿದರೆ ಪ್ರಪಂಚವೆ ಬೇರೆ ಕಾಣಿಸುತ್ತದೆ.

ಏಕೆ ಹೀಗೆ ಅಂದರೆ ಅವರವರ ದೃಷ್ಟಿ ಬೇರೆ ಬೇರೆ ಎಂದರ್ಥ. ಒಂದು ಸಲ ಪೂಜ್ಯಶ್ರೀ ಸಿದ್ದೇಶ್ವರ ಸ್ವಾಮೀಜಿಯವರು ಪ್ರವಚನ ಮಾಡಲಿಕ್ಕೆ ಹೋದಾಗ ಪ್ರವಚನ ಮುಗಿದ ಮೇಲೆ ಒಬ್ಬ ವ್ಯಕ್ತಿ ಅವರಿಗೆ ಕೇಳಿದನಂತೆ ಗುರುಗಳೆ ನಿಮ್ಮ ಅಂಗಿಯ ಕಾಲರ್ ಕೆಳಗೆ ಸ್ವಲ್ಪ ಹರಿದಿದೆ ಒಂದು ಹೊಸ ಅಂಗಿಯನ್ನು ಹೊಲಿಸೋಣ ಎಂದ. ಅದಕ್ಕೆ ಅವರು ಹೇಳಿದರಂತೆ ಅಲ್ಲೊ ತಮ್ಮ ಉಳಿದ ಕಡೆ ಎಲ್ಲಾ ಚೆನ್ನಾಗಿ ಇದೆ. ಅದನ್ನು ನೋಡುವದು ಬಿಟ್ಟು ಹರಿದ ಕಾಲರ್ ಮಾತ್ರ ನೋಡ್ತಿಯಲ್ಲ ಇದೆಂಥ ದೃಷ್ಟಿ? ಹಾಗೆ ಈ ಪ್ರಪಂಚದಲ್ಲಿ ಎಲ್ಲರೂ ಇದ್ದಿವಿ. ಆದರೆ ನೋಡುವ ದೃಷ್ಟಿ ಬೇರೆ ಇದೆ.

ಮನುಷ್ಯನನ್ನು ಬಿಟ್ಟು ಎಷ್ಟೊಂದು ಜೀವಿಗಳು ಅನೋನ್ಯವಾಗಿ ಬದುಕು ನಡೆಸುತ್ತವೆ. ಬೇರೆ ಬೇರೆ ಪಕ್ಷಿ ಪ್ರಾಣಿಗಳು ಕೂಡ ತಮ್ಮ ದೃಷ್ಟಿಯನ್ನು ಬದಲಿಸಿ ಸ್ನೇಹಮಾಡುತ್ತದೆ. ಆದರೆ ಈ ಪ್ರಪಂಚದಲ್ಲಿ ಬುದುಕುತ್ತಿರುವ ವ್ಯಕ್ತಿ ಮಾತ್ರ ಬದಲಾಗದೆ ಬದುಕುತ್ತಿದ್ದಾನೆ. ತನ್ನ ದೃಷ್ಟಿಯನ್ನು ಬದಲಿಸದೆ ಸದಾ ದ್ವೇಷ, ಅಸೂಯೆ, ನಾನು, ನನ್ನದು ಎಂದು ಸ್ವಾರ್ಥ ವ್ಯರ್ಥ ಜೀವನ ಸಾಗಿಸುತ್ತಿದ್ದಾನೆ. ಈ ಪ್ರಚಂಚದಲ್ಲಿ ನಾವೆಲ್ಲರೂ ಪ್ಾತ್ರಧಾರಿಗಳು ಅಷ್ಟೆ. ನಮ್ಮ ಸಮಯ ಬಂದಾಗ ನಾವು ಚೆನ್ನಾಗಿ ಪಾತ್ರ ನಿಬಾಯಿಸಿ ಹೋಗುವುದು ಅಷ್ಟೆ. ಸ್ವಲ್ಪ ಏರು ಪೇರಾದರೂ ಈ ಪ್ರಪಂಚ ನೋಡುವ ದೃಷ್ಟಿ ಬೇರೆನೆ ಇರುತ್ತದೆ. ಆದ್ದರಿಂದ ಎಚ್ಚರವಹಿಸಿ ನಮ್ಮ ಪಾತ್ರ ನಿಭಾಯಿಸಬೇಕು.

ಮನುಷ್ಯ ಎಷ್ಟೇ ಚೆನ್ನಾಗಿ ಬದುಕಿದರೂ ಒಂದು ಮಾತು ಹೇಳೇ ಹೇಳ್ತಾರೆ. ಅವನು ಹಾಗೆ ಬದುಕಿದ ಹೀಗೆ ಬದುಕಿದ ಅಂತ ಅದು ಅವರವರ ದೃಷ್ಟಿಕೋನ. ನೀನು ಚೆನ್ನಾಗೆ ಬದುಕು ಅಂದರೆ ನಿಮ್ಮ ಮನಸ್ಸಿಗೆ ನಾನು ಸರಿಯಾಗಿ ನಡೆಯುತ್ತಿದ್ದೆನೆ ಅಂಥ ಅನ್ನಿಸಬೇಕು. ಹಾಗೂ ಇತರರನ್ನು ಬದುಕಿಸು ಅಂದರೆ ಇನ್ನೊಬ್ಬರ ಜೊತೆ ಚೆನ್ನಾಗಿರು, ಕೈಲಾದರೆ ಸಹಾಯ ಮಾಡು ಮತ್ತು ಇತರರನ್ನು ಬದುಕಲು ಬಿಡು ಅಂದರೆ, ಬೇರೆಯವರನ್ನು ನೋಡುವ ದೃಷ್ಟಿ ಬದಲಿಸಲು ಅವರಿಗೆ ಹಿಯಾಳಿಸುವದು. ಮನಸ್ಸಿಗೆ ನೋವುಂಟು ಮಾಡುವುದು ಮಾಡಬೇಡ. ಮೊದಲು ತನ್ನ ತಾ ಅರಿತರೆ ಈ ಪ್ರಪಂಚವೇ ಚೆನ್ನಾಗಿ ಕಂಡೀತು ಎಂದು ಹೇಳಿ ಮುಗಿಸುತ್ತೇನೆ.



ಸಿಂದಗಿ ಶ್ರೀ ಪದ್ಮರಾಜ ಮಹಿಳಾ ಪದವಿಪೂರ್ವ ಕಾಲೇಜಿನ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಜಿ.ಪಿ.ಪೋರವಾಲ ಕಾಲೇಜಿನ ಪ್ರಾಚಾರ್ಯ ಡಿ.ಎಂ.ಪಾಟೀಲ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಿರುವ ಕ್ಷಣ.



ಸಿಂದಗಿ ಶ್ರೀ ಪದ್ಮರಾಜ ಮಹಿಳಾ ಪದವಿಪೂರ್ವ ಕಾಲೇಜಿನ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮದ ಸಾನಿಧ್ಯ ವಹಿಸಿದ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು ಮತ್ತು ಅತಿಥಿಗಳಾದ ಡಾ. ಚನ್ನಪ್ಪ ಕಟ್ಟಿ ಹಾಗೂ ಪ್ರಾಚಾರ್ಯ ಎಂ.ಎಸ್.ಹೈಯ್ಯಾಳಕರ ವಿದ್ಯಾರ್ಥಿಗಳಿಗೆ ತಾವೆ ಊಟ ಬಡಿಸುತ್ತಿರುವ ಕ್ಷಣ.



ಅಖಿಲ ಭಾರತ ಮಾನವೀಯತೆ ಸಂದೇಶ ವೇದಿಕೆ ಸಿಂದಗಿ ಶಾಖೆ ವತಿಯಿಂದ ನಡೆದ ಅಂತರ್ ಕಾಲೇಜು ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿ ಆರ ಡಿ ಪಾಟೀಲ ಕಾಲೇಜು ವಿದ್ಯಾರ್ಥಿ ಕುಮಾರ ಪ್ರದೀಪ .ಶಿ. ಧರಿ ಅವರು ವೇದಿಕೆಯ ಕಾರ್ಯದರ್ಶಿಗಳಾದ ಹಜರತ ಮೌಲಾನಾ ಸಯ್ಯದ ಬಿಲಾಲ ಅಬ್ದುಲ್ ಹೈ ಹಸನಿ ಇವರ ಹಸ್ತದಿಂದ ಪ್ರಥಮ ಬಹುಮಾನ ನಗದು ೫೦೦೧ ರೂಪಾಯಿ ಪಡೆದ ಕ್ಷಣ.

# ಸಾರಂಗ ಕಿರಣ

# SARANGA KIRAN

ಮಾಸ ಪತ್ರಿಕೆ

ಕನ್ನಡ ಮಾಸ ಪತ್ರಿಕೆ

ಸಂಪುಟ 02 | ಸಂಚಿಕೆ : 12 | ರಿ.ನಂ.ಕೆಎಆರ್‌ಕೆಎಎನ್/2021/81161 | ವಿಜಯಪುರ | ಮಾರ್ಚ, 2023 | ಪುಟ: 08 | ಬೆಲೆ: ರೂ. 10/-

Volume : 02 | Issue : 12 | Reg. No.: KARKAN/2021/81161 | Vijayapur | March, 2023 | Page : 08 | Price : Rs.10/-





ಜಗದ್ಗುರು ರೇಣುಕಾಚಾರ್ಯರ ಜಯಂತಿ ದಿನಾಂಕ: ೦೫-೦೩-೨೦೨೩


# ಸಾರಂಗ ಕಿರಣ

## SARANGA KIRAN

ಮಾಸ ಪತ್ರಿಕೆ

ಕನ್ನಡ ಮಾಸ ಪತ್ರಿಕೆ

ಸಂಪುಟ 03 ಸಂಚಿಕೆ : 06 ರಿ.ನಂ.ಕೆಎಆರ್‌ಕೆಎಎನ್/2021/81161 ವಿಜಯಪುರ ಸೆಪ್ಟೆಂಬರ್, 2023 ಪುಟ: 08 ಬೆಲೆ: ರೂ. 10/-
Volume : 03 Issue : 06 Reg. No.: KARKAN/2021/81161 Vijayapur September, 2023 Page : 08 Price : Rs.10/




ಶ್ರೀ ಪದ್ಮರಾಜ ಫ್ರೀ ಬೋರ್ಡಿಂಗಿನ ಆಶ್ರಯದಲ್ಲಿ ನೂತನವಾಗಿ ಪ್ರಾರಂಭಗೊಂಡ
ಶ್ರೀ ಪದ್ಮರಾಜ ಸಂಸ್ಕೃತ-ವೇದ ಪಾಠಶಾಲೆ ಉದ್ಘಾಟನಾ ಸಮಾರಂಭ
ದಿನಾಂಕ: ೨೩-೦೮-೨೦೨೩ ಮುಂಜಾನೆ ೧೦ ಗಂಟೆ ಸ್ಥಳ : ಸಾರಂಗಮಠ ಸಿಂದಗಿ

# ಪುರಂದರದಾಸರ ಕೀರ್ತನೆಗಳ ಸಾರ

ಪೂಜಾ ಅನೂರ
ಜಿ.ಪಿ.ಪೋರವಾಲ ಕಾಲೇಜ, ಸಿಂದಗಿ

ದಾಸಕೂಟದ ಪಿತಾಮಹರಾಗಿ ಕನ್ನಡ ನಾಡಿನಲ್ಲಿ 'ದಾಸರೆಂದರೆ ಪುರಂದರ ದಾಸರಯ್ಯ' ಎಂದು ತಮ್ಮ ಗುರುವಾದ ವ್ಯಾಸರಾಯರಿಂದ ಪ್ರಶಂಸೆಗೆ ಪಾತ್ರರಾದವರು ಪುರಂದರದಾಸರು. ಪುರಂದರದಾಸರ ಬಗೆಗೆ ತಿಳಿಸುವುದಾದರೆ

ಚಂಪೂ ಪ್ರಕಾರಕ್ಕೆ ಪಂಪ
ರಗಳೆ ಪ್ರಕಾರಕ್ಕೆ ಹರಿಹರ
ಷಟ್ಪದಿ ಪ್ರಕಾರಕ್ಕೆ ರಾಘವಾಂಕ
ಸಾಂಗತ್ಯ ಪ್ರಕಾರಕ್ಕೆ ರತ್ನಾಕರವರ್ಣಿ
ತ್ರಿಪದಿ ಪ್ರಕಾರಕ್ಕೆ ಸರ್ವಜ್ಞ

ಹಾಗೆಯೇ ವಚನ ಪ್ರಪಂಚಕ್ಕೆ ಬಸವೇಶ್ವರರು ಕೀರ್ತನ ಕ್ಷೇತ್ರಕ್ಕೆ ಪುರಂದರದಾಸರು ಪ್ರಮುಖರು.

ಪುರಂದರದಾಸರ ಕೀರ್ತನೆಗಳ ಶೈಲಿ ಅತ್ಯಂತ ಸರಳವಾಗಿದ್ದು ಸಂಗೀತದ ಮಾಧುರ್ಯ, ಸಾಹಿತ್ಯದ ಸ್ವಾರಸ್ಯ ಮತ್ತು ಧರ್ಮದ ಸಂದೇಶವು ಸರಿಸಮವಾಗಿ ಬೆರೆತು ಎಲ್ಲರಿಗೂ ಪ್ರಿಯವಾಗುವಂತಿವೆ. ಇವರ ಕೀರ್ತನೆಗಳಲ್ಲಿ ಆತ್ಮನಿವೇದನೆ, ಭಗವಂತನ ನಾಮಸ್ಮರಣೆ ,ಆತನ ವರ್ಣನೆ, ನೀತಿ ಭೋದನೆ ಮತ್ತು ಲೀಲಾ ವಿನೋದಗಳು ಚಿತ್ರಿತವಾಗಿವೆ. ಇವರ ಕೀರ್ತನೆಗಳು ಬಹುಭಾಗ ಭಕ್ತಿಯಿಂದ ಕೂಡಿವೆ, ಅವರ "ಸಾಹಿತ್ಯದ ವೃಕ್ಷಕ್ಕೆ ಭಕ್ತಿಯೇ ತಾಯಿ ಬೇರು" ಎನ್ನಬಹುದು.

**ಅಂತರಂಗದ ಭಕ್ತಿ:-**

ಪುರಂದರದಾಸರು ಭಕ್ತಿ ಭಾವದ ಆಚರಣೆಯ ಬಗೆಗೆ ಹೇಳುವಾಗ ಸತ್ಯವಾದ ಧರ್ಮ ಯಾವುದೆಂದು ತೋರಿಸಲೆತ್ನಿಸಿದರು.

ಮನವ ಶೋಧಿಸಬೇಕು ನಿಚ್ಚ
ದಿನ ದಿನ ಮಾಡುವ ಪಾಪ ಪುಣ್ಯದ ವೆಚ್ಚ
ತನುವ ಖಂಡಿಸಿ ಒಮ್ಮೆ ಮಾಣೊ
ನಿನ್ನ ಮನವ ದಂಡಿಸಿ ಪರಮಾತ್ಮನ ಕಾಣೊ
ಕೊನೆಗೆ ನಿನ್ನೊಳಗೆ ನೀ ಜಾಣೊ
ಮುಕ್ತಿ ಏನು ದೂರಿಲ್ಲವೋ ಒಂದೇ ಗೇಣೋ

ಇತ್ಯಾದಿ "ಆಚಾರಕ್ಕಿಂತಲೂ ವಿಚಾರ ಮುಖ್ಯ, ಕುರುಡು ಶ್ರದ್ಧೆಗಿಂತಲೂ ಸಾಧನೆ ಮುಖ್ಯ, ಬಹಿರಂಗವಾದ ಪೂಜೆ ಪುನಸ್ಕಾರಗಳಿಗಿಂತಲೂ ಅಂತರಂಗದ ಭಕ್ತಿ ಮುಖ್ಯ," ಎನ್ನುವುದನ್ನು ಈ ಮೇಲಿನ ಕೀರ್ತನೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಮುಂದುವರೆದು

" ಕಣ್ಣಿನೊಳಗೆ ನೋಡೊ ಹರಿಯ
ಒಳಗಣ್ಣಿನಿಂದಲಿ ನೋಡೊ ಮೂಜಗದೊಡೆಯ"

ಎಂಬ ಅದ್ಭುತವಾದ ಮಾತುಗಳನ್ನಾಡಿರುವರು.

ಮಾನವೀಯತೆಯನ್ನು ಕಳೆದುಕೊಂಡ ದುರ್ಜನರ ಸ್ವಭಾವ, ಅನ್ಯರಿಗೆ ಉಪಕಾರವ ಮಾಡದೆ ಸಮಾಜ ಜೀವನಕ್ಕೆ ಭಾರವಾಗಿರುವವರ ಕುರಿತು "ಬೇವು ಬೆಲ್ಲದೊಳಿಡಲೇನು ಫಲ" ಎಂದು ವಿಡಂಬನೆಯನ್ನ ಮಾಡುವರು ಕಪಟಿಗಳು, ಮೋಸಗಾರರು, ವೇಷಗಾರರು, ಎಷ್ಟೇ ಧ್ಯಾನವನ್ನು ಮಾಡಿದರು ಯಾವುದೇ ಪ್ರಯೋಜನವಾಗಲಾರದು. ಇಂದು ಅಂತರಂಗದ ಪರಿಶುದ್ಧತೆಯು ಬಹಳ ಅವಶ್ಯಕವಾಗಿರುವುದೆನ್ನುವರು.

"ಮನವೇ ಗಂಗೆ ಮನವೇ ಮಣಿಕರ್ಣಿಕೆಯು ಎಂದು ಹೃದಯ ಪರಿಶುದ್ಧವಾಗಿರಬೇಕು ಕಲ್ಲಾಗಿರಬೇಕು ಕಠಿಣ ಭವ ತೊರೆಯೊಳಗೆ ಬಿಲ್ಲಾಗಿರಬೇಕು ಬಲ್ಲವರೊಳಗೆ ಬೆಲ್ಲವಾಗಿರಬೇಕು ಬಂಧುಜನರೊಳಗೆ", ಎಂಬ ಮಾತುಗಳಲ್ಲಿ ಮನಸ್ಸು ತಿಳಿಯಾಗಿರಬೇಕು, ದೃಢವಾಗಿರಬೇಕೆಂದು ಎಚ್ಚರಿಸಿದ್ದಾರೆ.

ಕಪಟತನದಲಿ ಕಾಡುತ ಜನರನು
ಜಪವನು ಮಾಡಿದರೇನು ಫಲ
ಕುಪಿತತನವನು ಬಿಡದೆ ನಿರಂತರ
ಜಪವನು ಮಾಡಿದರೇನು ಫಲ

**ಸಾಮಾಜಿಕ ದೃಷ್ಟಿ:-** ಕವಿಯಾಗಲಿ, ಕಲಾವಿದನಾಗಲಿ, ದಾಸನಾಗಲಿ, ದಾರ್ಶನಿಕನಾಗಲಿ ಎಲ್ಲಾ ಕಾಲಕ್ಕೂ ನಿಲ್ಲಬಲ್ಲ ಮೌಲ್ಯಗಳನ್ನೇ ಪ್ರತಿಪಾದಿಸುವುದು, ಪ್ರತಿನಿಧಿಸುವುದು ದಿಟವಾದರೂ ಆ ಪ್ರತಿಪಾದನೆಯ ಸಂವಿಧಾನವಾಗಲೀ ಸಾರ್ಥಕತೆಯಾಗಲೀ ಯುಗಧರ್ಮವನ್ನೇ ಅವಲಂಬಿಸಿದೆ.

ಬೂಟಕತನವನ್ನು ನೋಡಿ ಭ್ರಮಿಸದಿರಿ ಜನರೇ
ಮಂಡೆ ಬೋಳಾದರೆ ಸಾಲದು, ಮನ ಬೋಳಾಗಬೇಕು
ತನುವ ನೀರೊಳಗದ್ದಿ ಫಲವೇನು,
ಮನದಲ್ಲಿ ದೃಢವಿಲ್ಲದಾ ಮನುಜರು
ಘಾತಕವನ್ನು ಬಿಡದೆ ನಿರಂತರ ಗೀತೆಯನೊದಿದರೇನು ಫಲ?
ಹೀನ ಕೃತ್ಯಗಳ ಮಾಡುತಾ ನದಿಯಲ್ಲಿ
ಸ್ನಾನವ ಮಾಡಿದರೇನು ಫಲ?

ಎಂದು ಹೇಳುವಾಗ ಅವರಲ್ಲಿ ಆಕ್ರೋಶವೇ ಕಾಣುತ್ತದೆ. ಕೆಲವರು ಧರ್ಮವನ್ನು ಕೇವಲ ಪ್ರತಿಷ್ಠೆಗಾಗಿ, ಹೆಗ್ಗಳಿಕೆಗಾಗಿ ಬಳಸಿಕೊಳ್ಳುವುದೇ ಮಡಿವಂತಿಕೆಯ ಅಥವಾ ಬೂಟಕತನದ ತಾತ್ಪರ್ಯವೆಂಬುದು ದಾಸರವಾದವಾಗಿದೆ. .ಧರ್ಮದ ನೆಪ ಮಾಡಿಕೊಂಡು ಜನರನ್ನು ಮೋಸಗೊಳಿಸಿ ಸ್ವಾರ್ಥವನ್ನು ಸಾಧಿಸಿಕೊಳ್ಳುವವರು ಕೆಲವರಾದರೆ, ವಿಚಾರ ಮಾಡದೇ

# ಸಾರಂಗ ಕಿರಣ

**SARANGA KIRAN** ಮಾಸ ಪತ್ರಿಕೆ

ಕನ್ನಡ ಮಾಸ ಪತ್ರಿಕೆ

ಸಂಪುಟ 03 ಸಂಚಿಕೆ : 07 ರಿ.ನಂ.ಕೆಎಆರ್‌ಕೆಎಎನ್/2021/81161 ವಿಜಯಪುರ ಅಕ್ಟೋಬರ, 2023 ಪುಟ: 08 ಬೆಲೆ: ರೂ. 10/-

Volume : 03 Issue : 07 Reg. No.: KARKAN/2021/81161 Vijayapur October, 2023 Page : 08 Price : Rs.10/-




**ಪ್ರೋ. ಎ ಎಸ್ ಕಿರಣ್ ಕುಮಾರ್** ಮಾಜಿ ಅಧ್ಯಕ್ಷರು ISRO, ಸಿಂದಗಿಗೆ ನವೆಂಬರ ೧೮ ರಂದು ಬರಲು ಒಪ್ಪಿಗೆ ಸೂಚಿಸಿದ್ದಾರೆ, ಪದ್ಮಶ್ರೀ ರಾಷ್ಟೀಯ ಪ್ರಶಸ್ತಿ ವಿಭೂಷಿತರಾದ ಇವರನ್ನು ೨೦೨೩ ನೇ ಸಾಲಿಗಾಗಿ ಪೂಜ್ಯಶ್ರೀ ಚನ್ನವೀರ ಸ್ವಾಮೀಜಿ ಪ್ರತಿಷ್ಠಾನದಿಂದ ಕೊಡ ಮಾಡಲಿರುವ ರಾಷ್ಟ್ರಮಟ್ಟದ ಶ್ರೇಷ್ಠ ವಿಜ್ಞಾನಿ "**ಭಾಸ್ಕರ ಪ್ರಶಸ್ತಿ**" ಸ್ವೀಕರಿಸಲು ಒಪ್ಪಿಗೆ ಸೂಚಿಸಿದ ಸಂದರ್ಭ

# ಗಾಂಧೀಜಿಯವರ ಸರ್ವೋದಯ ಸಮಾಜದ ಕಲ್ಪನೆ

ಕುಮಾರಿ. ಸಂಗಮ್ಮ ಬಿರಾದಾರ
ಜಿ.ಪಿ.ಪೋರವಾಲ ಕಲಾ, ವಾಣಿಜ್ಯ ಮತ್ತು
ವಿ.ವಿ.ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ

ಇತಿಹಾಸದ ಪುಟಗಳನ್ನ ಅವಲೋಕಿಸುತ್ತಾ ಬಂದಾಗ ಕಾಲಕಾಲಕ್ಕೆ ತತ್ವಜ್ಞಾನಿಗಳು, ಧರ್ಮಗುರುಗಳು, ಮಹಾನ್ ವ್ಯಕ್ತಿಗಳು, ಸಮಾಜ ಸುಧಾರಕರು ಜನ್ಮ ತಾಳುತ್ತ ಬಂದಿದ್ದಾರೆ. ಭಾರತೀಯರ ಮನೆ ಮನಗಳಲ್ಲಿ ಉಸಿರಾಗಿ ಉಳಿದಿರುವ ಆದರ್ಶಪ್ರಾಯವಾದ ವ್ಯಕ್ತಿಗಳೆಂದರೆ ಬುದ್ಧ, ಬಸವ, ಗಾಂಧಿ, ಅಂಬೇಡ್ಕರರವರು ಪ್ರಮುಖರಾದವರು. ಈ ಮಹಾಪುರುಷರೆಲ್ಲರೂ ಕೂಡ ಕ್ರಾಂತಿಕಾರಿಯಾದ ಧಾರ್ಮಿಕ, ಸಾಮಾಜಿಕ ಚಳುವಳಿಯೊಂದನ್ನು ಪ್ರಾರಂಭಿಸಿ ತಾವೇ ಸ್ವತಃ ನೇತೃತ್ವವನ್ನು ವಹಿಸಿದರು. ಇವರು ಆದರ್ಶ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸಿದರು ಹಾಗೂ ಜನರ ಹಿತಕ್ಕಾಗಿ ಇವರೆಲ್ಲರೂ ಅನೇಕ ಅಭಿವೃದ್ಧಿ ಕ್ರಮಗಳನ್ನು ಕೈಗೊಂಡರು. ಇಂತಹ ಶ್ರೇಷ್ಠ ಸಾಮಾಜಿಕ ಚಿಂತನಕಾರರು ಹಾಗೂ ಸಮಾಜ ಸುಧಾರಕರಲ್ಲಿ ಗಾಂಧೀಜಿಯವರ ಹೆಸರು ಅವಿಸ್ಮರಣೀಯವಾಗಿದೆ.

ರಾಷ್ಟ್ರಪಿತ ಎಂಬ ಬಿರುದನ್ನು ಪಡೆದ ಗಾಂಧೀಜಿಯವರು ನಿಜವಾಗಿಯೂ ವಾಸ್ತವಿಕ ತತ್ವಜ್ಞಾನಿಗಳು. ಸತ್ಯ, ಅಹಿಂಸೆ, ಸತ್ಯಾಗ್ರಹ ಮುಂತಾದ ತಮ್ಮ ಹಲವಾರು ಆದರ್ಶಗಳಿಂದ ಗಾಂಧೀಜಿಯವರು ಜನಸಾಮಾನ್ಯರ ಹೃದಯವನ್ನೇ ಗೆದ್ದಿದ್ದಾರೆ. ಗಾಂಧೀಯವರು ತಮ್ಮಲ್ಲಿ ಸರ್ವೋದಯ ತತ್ವದ ಕಾರ್ಯವನ್ನು ಅಳವಡಿಸಿಕೊಂಡರು. ಗಾಂಧಿಯವರು ಹೇಳುವ ಪ್ರಕಾರ ಸರ್ವೋದಯ ಸಮಾಜದಲ್ಲಿ ರಾಜ್ಯದ ದಬ್ಬಾಳಿಕೆಯಲ್ಲಿ ಜಾತಿಗೆ ಸ್ಥಾನವಿಲ್ಲ, ಹಿಂಸೆಗೆ ಆಸ್ಪದವಿಲ್ಲ, ಮೇಲು ಕೀಳು ಎಂಬ ಭೇದವಿಲ್ಲವೆಂದು ತಿಳಿಸುವರು.

**ಸರ್ವೋದಯ ಸಮಾಜದ ಕಾರ್ಯಚಟುವಟಿಕೆಗಳು:**

ಸರ್ವೋದಯ ಸಮಾಜದ ರಚನೆಯಾಗಬೇಕಾದರೆ ಕೆಲವೊಂದು ಪ್ರಗತಿಪರ ಚಟುವಟಿಕೆಗಳನ್ನು ಕಾರ್ಯಾಚರಣೆಯಲ್ಲಿ ತರಬೇಕೆಂಬ ಆಸೆ ಮಹಾತ್ಮ ಗಾಂಧೀಜಿಯವರಲ್ಲಿದ್ದಿತು. ಕೇವಲ ಉಪದೇಶದಿಂದ ಸರ್ವೋದಯದ ಗುರಿಯನ್ನು ತಲುಪಲು ಸಾಧ್ಯವಿಲ್ಲವೆಂದು ಅರಿತ ಗಾಂಧೀಜಿಯವರು ಕೆಲವೊಂದು ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುತ್ತಾರೆ.

**ಗ್ರಾಮಗಳ ಅಭಿವೃದ್ಧಿ:**

ನಮ್ಮ ದೇಶದ ಸ್ವರಾಜ್ಯದ ಬೆಳವಣಿಗೆಯಾಗುವುದು ಅದು ಗ್ರಾಮಗಳಿಂದಲೇ ಆಗಬೇಕು. "ಹಳ್ಳಿಗಳು ಏಳಿಗೆಯಾದರೆ ದೇಶದ ಏಳಿಗೆಯೂ ಸಾಧ್ಯ"

೧. ಇದು ಮಹಾತ್ಮ ಗಾಂಧೀಜಿಯವರು ಗ್ರಾಮೀಣ ಸಮುದಾಯಗಳ ಬಗ್ಗೆ ಹೊಂದಿರುವ ಮನೋಭಾವನೆಯಾಗಿತ್ತು. ಈ ಯೋಜನೆಗಳು ದಿಲ್ಲಿಯಿಂದ ಹಳ್ಳಿಗೆ ಇಳಿದು ಬರಕೂಡದು, ಹಳ್ಳಿಯಿಂದ ದಿಲ್ಲಿಗೆ ಸಾಗಿ ಹೋಗಬೇಕು. ನನ್ನ ದೃಷ್ಟಿಯಲ್ಲಿ ಪ್ರತಿಯೊಂದು ಹಳ್ಳಿಯು ಒಂದು ಸ್ವತಂತ್ರ ಜಗತ್ತಿನಂತಿರಬೇಕು ಎಂದು ಗಾಂಧೀಜಿಯವರು ಹೇಳುತ್ತಿದ್ದರು.

೨.ಗ್ರಾಮೀಣ ಜನರು ತಮ್ಮ ಅವಶ್ಯಕತೆಗಳನ್ನು ತಮ್ಮಲ್ಲಿಯೇ ಪೂರೈಸಿಕೊಂಡು ಸ್ವತಂತ್ರ ಮತ್ತು ಸ್ವಾವಲಂಬಿ ಬದುಕನ್ನು ಸಾಗಿಸುವಂತಾಗಬೇಕು. ಯಂತ್ರೋಪಕರಣಗಳ ಜಗತ್ತಿನಲ್ಲಿ ಗ್ರಾಮೀಣ ಗೃಹ ಕೈಗಾರಿಕೆಗಳು ಮತ್ತು ಕುಲಕಸುಬುಗಳು ಕ್ರಮೇಣವಾಗಿ ಕಣ್ಮರೆಯಾಗುತ್ತಾ ನಡೆದಿವೆ. ಇದರಿಂದ ಬಹುಸಂಖ್ಯಾತ ಹಳ್ಳಿಗರು ಉದ್ಯೋಗವನ್ನರಸುತ್ತ ನಗರಗಳಿಗೆ ವಲಸೆ ಬರತೊಡಗಿದರು. ಗ್ರಾಮೀಣ ಕುಶಲಕೈಗಾರಿಕೆಗಳು ಬೆಳೆಯಲು ನಾವು ಅನುಕೂಲಗಳನ್ನು ಕಲ್ಪಿಸಿಕೊಡಬೇಕು ಹಾಗೇ ಹಲವು ಕೆಲಸಗಳಲ್ಲಿಯೂ ಕೂಡ ಹಳ್ಳಿಗರು ಹೆಚ್ಚಿನ ಆಸಕ್ತಿಯನ್ನು ಹೊಂದುವಂತಾಗಬೇಕು. ಅದಕ್ಕಾಗಿ ಸರಕಾರವು ನೆರವನ್ನು ಕಲ್ಪಿಸಿಕೊಡಬೇಕು ಎಂಬುವುದು ಗಾಂಧೀಜಿಯವರ ಸಾಮಾಜಿಕ ವಿಚಾರಗಳಲ್ಲಿ ಒಂದು ಅಂಶವಾಗಿತ್ತೆಂದು ಹೇಳಬಹುದು.

**ಖಾದಿಯ ಪ್ರಚಾರ:**

ಸ್ವದೇಶಿ ಆಂದೋಲನದ ಪ್ರಥಮ ಹೆಜ್ಜೆಯೆಂದರೆ ಖಾದಿ. ಅರೆಹೊಟ್ಟೆಯುಂಡು ತೊಳಲುತ್ತಾ ಬಳಲುತ್ತಿರುವ ಕೋಟ್ಯಾಂತರ ಜನರನ್ನು ನೆಮ್ಮದಿಯಿಂದ ಜೀವಿಸಲು